


**ಛಾಯಾಚಿತ್ರ ೯೮**

ಇದೂ ಕೂಡ ಅದೇ ಸ್ಟುಡಿಯೋದಲ್ಲಿ ತೆಗೆದ ಮೂರನೇ ಚಿತ್ರ. ಈ ಚಿತ್ರದ ಬಗ್ಗೆ ಸ್ವಾಮಿ ಶ್ರದ್ಧಾನಂದರು ಕೊಟ್ಟ ಮಾಹಿತಿ ಈ ರೀತಿ ಇದೆ:

"ಒಮ್ಮೆ ನಾನು ಬೇಲೂರು ಮಠದಲ್ಲಿರುವ ಸ್ವಾಮೀಜಿಯವರ ಕೋಣೆಯನ್ನು ಸ್ವಚ್ಛ ಮಾಡುತ್ತಿದ್ದೆ. ಆಗ ಮಹಾಪುರುಷಜಿ (ಸ್ವಾಮಿ ಶಿವಾನಂದ) ಮಹಾರಾಜರು ಬಂದರು. ದಟ್ಟವಾದ ಕಪ್ಪು ಮತ್ತು ಗುಂಗುರು ಕೂದಲು ಹಾಗೂ ಪಾಶ್ಚಿಮಾತ್ಯ ಉಡುಪಿನಲ್ಲಿ ಇರುವ ಈ ಚಿತ್ರದ ದೊಡ್ಡ ಪ್ರತಿಯನ್ನು ಕಟ್ಟು ಹಾಕಿಸಿ ಉತ್ತರದಿಕ್ಕಿನ ಗೋಡೆಯಲ್ಲಿ ನೇತುಹಾಕಲಾಗಿತ್ತು. ಈ ಚಿತ್ರವನ್ನು ನೋಡಿ, 'ಈ ಚಿತ್ರದಲ್ಲಿ ಸ್ವಾಮೀಜಿ ಎಷ್ಟು ಭವ್ಯವಾಗಿ ಕಾಣಿಸುತ್ತಿದ್ದಾರೆ! ನಿವೇದಿತಾ ಸ್ವಾಮೀಜಿಯವರನ್ನು 'ರಾಜ' ಎಂದು ಸಂಬೋಧನೆ ಮಾಡುತ್ತಿದ್ದಳು. ನಿಜವಾಗಿಯೂ ಅವರು ರಾಜನಂತೆ ಕಾಣುತ್ತಿದ್ದಾರೆ. ಅಮೆರಿಕದಲ್ಲಿ ಸ್ವಾಮೀಜಿಯವರನ್ನು 'ಜನಮಾನಸದ ಯುವರಾಜ' (prince among men) ಎಂದು ಕರೆಯುತ್ತಿದ್ದರು' ಎಂದು ಮಹಾಪುರುಷಜಿಯವರು ಉದ್ಗಾರ ಮಾಡಿದರು."

ಈ ಚಿತ್ರ ಈಗಲೂ ಸ್ವಾಮೀಜಿಯವರ ಕೋಣೆಯಲ್ಲಿ ವಿರಾಜಮಾನವಾಗಿದೆ. ಸ್ವಾಮೀಜಿಯವರ ಜನಪ್ರಿಯ ಚಿತ್ರಗಳ ಪೈಕಿ ಇದೂ ಒಂದು.

**ಛಾಯಾಚಿತ್ರ ೯೯**

ಇದು ಸ್ಯಾನ್‌ಫ್ರಾನ್ಸಿಸ್ಕೋದ ಸ್ಟುಡಿಯೋದಲ್ಲಿ ತೆಗೆದ ನಾಲ್ಕನೆಯ ಹಾಗೂ ಕೊನೆಯ ಚಿತ್ರ.

"ನನ್ನ ಜೀವನದಲ್ಲೊಂದು ಉತ್ಕ್ರಾಂತಿಯೇ ಆಯಿತು. ಇಂತಹ ಒಂದು ಉತ್ಕ್ರಾಂತಿ ನನ್ನನ್ನು ರಾಮಕೃಷ್ಣರಲ್ಲಿಗೆ ಕರೆ ತಂದಿತು; ಇನ್ನೊಂದು ನನ್ನನ್ನು ಅಮೆರಿಕೆಗೆ ಕಳುಹಿಸಿತು" ಎಂದು ಸ್ವಾಮೀಜಿ ಸೋದರಿ ನಿವೇದಿತಾಗೆ ಬರೆದ ಪತ್ರವೊಂದ ರಲ್ಲಿ ಹೇಳುತ್ತಾರೆ.




ಸಾಧನಾವಧಿಯಲ್ಲಿ ಸ್ವಾಮೀಜಿಯವರ ದೃಷ್ಟಿಕೋನ ಹೇಗಿತ್ತು? ಅವರ ತಮ್ಮ ಮಹೇಂದ್ರನಾಥ ದತ್ತ ಬರೆಯುತ್ತಾರೆ: **"Who will win, I the pure consciousness or you the objective world? The world can not overpower me. I will conquer it"** ಜಡಜಗತ್ತು ಗೆಲ್ಲುತ್ತದೆಯೋ ಅಥವಾ ಚೈತನ್ಯಸ್ವರೂಪನಾದ ನಾನೋ? ಜಗತ್ತು ನನ್ನನ್ನು ಆಳಲಾರದು. ನಾನೇ ಜಗತ್ತಿನ ಮೇಲೆ ಸ್ವಾಮ್ಯವನ್ನು ಪಡೆಯುತ್ತೇನೆ." ಇಂಥ ದೃಢತೆ ಅವರದಾಗಿತ್ತು. ಗಿರೀಶ ಘೋಷ್‌ಗೆ ಒಮ್ಮೆ ಸ್ವಾಮೀಜಿ ಹೇಳುತ್ತಾರೆ: "ಮಾಯೆ ನನ್ನನ್ನು ಸೋಲಿಸಲು ಹವಣಿಸುತ್ತಿದ್ದಾಳೆ. ನಾನು ಅವಳನ್ನು ಸೋಲಿಸಲು ಹೋರಾಡುತ್ತಿದ್ದೇನೆ. ಈರ್ವರ ಮಧ್ಯೆ ಒಪ್ಪಂದವಾಗಲು ಸಾಧ್ಯವೇ ಇಲ್ಲ. ಒಂದೋ ಮಾಯೆ ಮಡಿಯಬೇಕು ಅಥವಾ ನಾನು ಮಡಿಯಬೇಕು. ಇಬ್ಬರೂ ಒಟ್ಟಿಗೆ ಇರಲಾಗದು" ಸ್ವಾಮೀಜಿಯವರದು ಎಂಥ ದೃಢನಿರ್ಧಾರ ಮತ್ತು ಘನತರ ಚಿಂತನೆ! ಮಾಯೆಯ ಮೇಲಿನ ವಿಜಯ, ಆತ್ಮಪ್ರಭುತ್ವ – ಇವೇ ಸ್ವಾಮೀಜಿಯವರ ಸಿದ್ಧಿಗಳು.

ಮೂಲ: **ಸ್ವಾಮಿ ಚೇತನಾನಂದ** ಅನುವಾದ: **ಮಾತಾ ತ್ಯಾಗಮಯೀ**